

ಹೋಗಿತ್ತು. ಹನುಮನ ಬಾಲದಂಥ ಹಗ್ಗ ಹಿಡಿದು ಹತ್ತಿರದ ಹಳ್ಳಿಯ ಜನ ಸಾಲು ಹಚ್ಚಿ ಬದುವಿನಲ್ಲಿ ನಡೆಯುತ್ತಿದ್ದರು. ದಿನದ ನಾಲ್ಕು ಬಿಂದಿಗೆ ನೀರಿಗಾಗಿ ಇನ್ನಿಲ್ಲದ ಕಷ್ಟಪಡುತ್ತಿದ್ದರು.

'ಹೂಳು ತೆಗಿತಾರ ಖರೇ! ಆದ್ರ ಸಾಹೇಬ್ರ, ಕೆರಿಯಾಗ ನೀರು ಬರಬೌದೇನ್ರೀ? ಇಷ್ಟು ವರ್ಸ್‌ದಿಂದ ಮಳೀನೇ ಬರ‍್ತಾ ಇಲ್ಲಲ್ರೀ!' ಖಾಲಿ ಬಿಂದಿಗೆಯೊಂದಿಗೆ ಕೆರೆ ದಂಡೆಯಲ್ಲಿ ಕುಳಿತಿದ್ದ ಹಿರಿಯರೊಬ್ಬರು ಕೇಳಿದ್ದರು. ಎರಡು ಮೂರು ವರ್ಷಗಳ ಜಲಕ್ಷಾಮದ ಕರಾಳ ಅನುಭವ ಅವರ ನಿರಾಸೆಯ ನುಡಿಯಾಗಿತ್ತು. ಕೆರೆ ಹೂಳು ತೆಗೆದ ಬಳಿಕ ಈ ವರ್ಷದ ಉತ್ತಮ ಮಳೆಗೆ ಇಂದು ಭರ್ತಿ ನೀರು ನಿಂತಿದೆ. ನೂರಾರು ಎಕರೆಯ ಭತ್ತದ ಬಯಲು ಕಬ್ಬಿನ ಕ್ಷೇತ್ರವಾಗಿ ಬದಲಾಗಿದೆ. ಹೂಳನ್ನು ಭೂಮಿಗೆ ಹಾಕಿದ್ದರಿಂದ ಇಳುವರಿ ಹೆಚ್ಚಿದೆ. ಬೇಸಿಗೆ ಭತ್ತದ ಬೆಳೆಯೂ ಕೆಲವೆಡೆ ಶುರುವಾಗಿದೆ. ಊರಿನ ಬಣ್ಣ ಹಸಿರಾಗಿದ್ದು ಅವತ್ತು ಜಲಸಂಕಟದಲ್ಲಿ ಕಂಡಿದ್ದ ಹಳ್ಳಿ ಇದೇನಾ? ಎನ್ನುವಂತಾಗಿದೆ.

ಮುರ್ಕವಾಡಾ ಕೆರೆ ದಂಡೆಯಲ್ಲಿ ಕುಳಿತು ಸುರೇಶ್ ವಿಠ್ಠಲ ಗೌಡ ನಿತ್ಯ ಮೀನು ಮಾರುತ್ತಾರೆ. ಒಂದೊಂದು ಮೀನು ಒಂದರಿಂದ ಐದು ಕಿಲೋ ತೂಗುತ್ತವೆಯೆಂದು ಖುಷಿಪಡುತ್ತಾರೆ. ಕೆರೆ ಮೂಲಕ ಕೃಷಿ ಅಭ್ಯುದಯ ನೋಟದ್ದು ಒಂದು ಮುಖವಾದರೆ, ಜಮೀನು ಇಲ್ಲದವರಿಗೆ ಮೀನು ಹಿಡಿಯುವ ಕೆಲಸದಲ್ಲಿ ಆದಾಯ ದೊರಕಿದ್ದು ಇನ್ನೊಂದು ವಿಶೇಷ. ಬಲೆ ಬೀಸಿ ಹರಿಗೋಲಲ್ಲಿ ಮೀನುಹಿಡಿಯುತ್ತ ಕೆರೆಯಲ್ಲಿ ತೇಲುವ ಚಿತ್ರಕ್ಕೂ ಹೂಳು ತುಂಬಿ ಕೆರೆ ಹಾಳಾದ ನೋಟಕ್ಕೂ ಕೇವಲ ಐದೇ ವರ್ಷದ ಅಂತರವಿದೆ! ವರ್ಷಕ್ಕೆ ಒಂದು ಒಂದೂವರೆ ಲಕ್ಷ ರೂಪಾಯಿ ಗ್ರಾಮದೇವಿ ದೇವಸ್ಥಾನಕ್ಕೆ ಮೀನು ಹರಾಜಿನ ಹಣ ದೊರೆಯುತ್ತಿದೆ. ದೇಗುಲದ ಅಭಿವೃದ್ಧಿಗೆ ಕೆರೆ ನೀರು ಪರೋಕ್ಷವಾಗಿ ಕಾರಣವಾಗುತ್ತಿದೆ.

ಹಳಿಯಾಳ ಪೇಟೆಗೆ ಹೊಂದಿಕೊಂಡು ಬೆಳಗಾವಿ ರಸ್ತೆಯಂಚಿನ ಗುತ್ತಿಗೇರಿಯಲ್ಲಿ 18 ಎಕರೆ ಕೆರೆಯಿದೆ. ಸೀಮೆಯ ಎಮ್ಮೆಗಳು ನಿಶ್ಚಿಂತೆಯಿಂದ ಇಲ್ಲಿ ಕಳೆ ಗಿಡ ಮೇಯುತ್ತಿದ್ದವು. ಈಗ ಹೂಳೆತ್ತಿದ ಬಳಿಕ 15 ಅಡಿ ನೀರು ನಿಂತಿದೆ. ನಿತ್ಯ ನೂರಾರು ಜನ ವಾಯುವಿಹಾರಕ್ಕೆ ಬರುತ್ತಾರೆ. ಸುಮಾರು 10 ಕಿಲೋಮೀಟರ್ ದೂರದಿಂದ ಮಳೆ ನೀರು ಹರಿದು ಬಂದು ಇದರಲ್ಲಿ ಶೇಖರಣೆಯಾಗುತ್ತಿರುವ ಪರಿಣಾಮ ಸುತ್ತಲಿನ ಕೊಳವೆ ಬಾವಿಗಳಿಗೆ ಮರುಜೀವ ಬಂದಿದೆ. ಕೆರೆ ಭರ್ತಿಯಾದಾಗ ನಂತರ ಮುಂದೆ ಕೋಟೆ ಪಕ್ಕದ 44 ಎಕರೆಯ ತಿಮ್ಮಾಪುರ ಕೆರೆಗೆ ಹರಿಯುತ್ತದೆ. ಮುಂಚೆಲ್ಲ ಮಳೆಯಲ್ಲಿ ತಿಮ್ಮಾಪುರ ಕೆರೆಗೆ ನೀರು ಬಂದರೆ ಜನ ಭಯಪಡುತ್ತಿದ್ದರು, ಹಳ್ಳಿ ಮನೆಗಳಿಗೆ ಪ್ರವಾಹ ನುಗ್ಗುತ್ತಿತ್ತು. ಸುರಿದ ಮಳೆ ನೀರು ಗುತ್ತಿಗೇರಿ, ತಿಮ್ಮಾಪುರ ಹಳ್ಳಿಯಂಚಿನಲ್ಲಿ ಹರಿದು ಹಳ್ಳ ಸೇರುತ್ತಿತ್ತು. ಈಗ ಹೂಳು ಎತ್ತಿದ ನಂತರ ವಿಶಾಲ ಕೆರೆಗಳಲ್ಲಿ ಇಂದು 10–15 ಅಡಿಗಳಷ್ಟು ನೀರಿದೆ.

ಕಲಘಟಗಿ ರಸ್ತೆಯ ಕಾವಲವಾಡಾ ಕೆರೆಯಂಚಿನಲ್ಲಿ ಕುಡಿಯುವ ನೀರಿಗಾಗಿ ಮೂರು ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಸರಿಯಾಗಿ ನೀರು ಬಂದಿರಲಿಲ್ಲ. ಕಮರುತ್ತಿರುವ ಕಬ್ಬಿನ ಕೃಷಿಗೆ ನೀರು ಒದಗಿಸುವುದು ಹೋಗಲಿ, ಕುಡಿಯಲು ನೀರು ಕೊಡುವುದು ನಾಲ್ಕು ವರ್ಷ ಹಿಂದೆ ಕಷ್ಟವಿತ್ತು. ಈಗ ಕೆರೆ ಭರ್ತಿ ನೀರು ತುಂಬಿ ಕೊಳವೆಬಾವಿಗಳೇ ನೀರಲ್ಲಿ ಮುಳುಗಿವೆ. ಬೆಳವಟಗಿಯ 24 ಎಕರೆ ಕೆರೆಯ ಸರಹದ್ದಿನಲ್ಲಿ 25ಕ್ಕೂ ಹೆಚ್ಚು ಕೊಳವೆ ಬಾವಿಗಳಿವೆ. ಈಗ ಹೂಳು ತೆಗೆದು ನೀರು ತುಂಬಿದ್ದರಿಂದ ಎಲ್ಲೆಡೆಯೂ ನೀರ ನಗುವಿದೆ. ಐದು ವರ್ಷ ಕಾಲ ಮೀನು ಹಿಡಿಯಲು ನೀಡಿದ ಗುತ್ತಿಗೆಯಿಂದ ದೇಗುಲಕ್ಕೆ ಐದೂವರೆ ಲಕ್ಷ ರೂಪಾಯಿ ಆದಾಯ ಬರುತ್ತಿದೆ. ಹಳಿಯಾಳದ ಪ್ರತಿ ಕೆರೆಗಳು ನೀರಿನ ನೂರಾರು ಕಥೆ ಹೇಳುತ್ತಿವೆ. ನಾಗಶೆಟ್ಟಿ ಕೊಪ್ಪದ ಕೆರೆ ತೋರಿಸಲು ಜ್ಯೋತಿಬಾ ಪಾಟೀಲ್ ಜೊತೆಗೆ ಹಳ್ಳಿಯ ಹಲವರು ಬಂದಿದ್ದರು. ಪ್ರತಿಯೊಬ್ಬರಲ್ಲಿ ಕೆರೆ ನೀರಿನ ಖುಷಿ ಕಾಣುತ್ತಿತ್ತು. 16 ಎಕರೆಯಲ್ಲಿ 15 ಅಡಿ ನೀರು ತುಂಬಿದ ಬಳಿಕ ಹೆಚ್ಚುವರಿ ನೀರು ಕೋಡಿಯ ಮೂಲಕ ಡಿಸೆಂಬರ್‌ನಲ್ಲಿ ಹೊರಗಡೆ ಹರಿಯುತ್ತಿತ್ತು. ಆಟದ ಬಯಲಿನ ಹಾಗೇ ಕಾಣುತ್ತಿದ್ದ ಕೆರೆ ಹೂಳೆತ್ತಿದ ಬಳಿಕ ಸುತ್ತಲಿನ ಅಂತರ್ಜಲ ಹೆಚ್ಚಳಕ್ಕೆ ಕಾರಣವಾಗಿದೆ.

ಕಾಳಿ ಕಣಿವೆಯ ಹಳಿಯಾಳಕ್ಕೆ ತಟ್ಟಿಹಳ್ಳ, ಕರ್ಕಹಳ್ಳ, ಕುಮ್ಮನಟ್ಟಿ, ಮಂಗ್ಯಾನಹಳ್ಳ ಜಲಾನಯನ ಕ್ಷೇತ್ರವಿದೆ. ವಾರ್ಷಿಕ 1500 ಮಿಲಿ ಮೀಟರ್ ಮಳೆ ಸುರಿಯುವ ಇಲ್ಲಿ ವಾಡಿಕೆ ಮಳೆ ಸುರಿದರೂ ಜಲಕ್ಷಾಮ ಬರುವಷ್ಟು ಕಬ್ಬಿಗಾಗಿ ನೀರಿನ ಬಳಕೆಯೂ ಹೆಚ್ಚಿದೆ. ಹತ್ತು ವರ್ಷಗಳ



ಕೆರೆ ದಂಡೆಯಲ್ಲಿ ನೀರ ನಿರೀಕ್ಷೆ